ಎಂದು ಊಹಿಸಿದ್ದೆ. ಅದು ಖಾಕಿಯಾಗಿತ್ತೆಂದು ಆ ಟ್ಯೂಬ್ ಲೈಟಿನ ಬೆಳಕಿನಲ್ಲಿ ಗೊತ್ತಾಗಿರಲಿಲ್ಲ.

ನಾನು ನಕ್ಕೆ. 'ಹೆಂಗಸರಿಗೆ, ಬಸುರಿಯರಿಗೆ, ಮಕ್ಕಳನ್ನು ಹಿಡಿದುಕೊಂಡವರಿಗೆ ವಯಸ್ಸಾದವರಿಗೆ ಸೀಟು ಕೊಡುವುದು ಸೌಜನ್ಯವಲ್ಲವೇ?' ಎಂದು ಹೇಳಿದೆ. ಅಷ್ಟರಲ್ಲಿ ಮಂತ್ರಿಸ್ಕ್ವೇರ್ ನಿಲ್ದಾಣ ಬಂದಿತ್ತು. ಇನ್ನಷ್ಟು ಜನರು ಹತ್ತಿದರು. ಆಕೆ ನನ್ನಿಂದ ದೂರವಾಗುತ್ತಿದ್ದಳು. ಆದರೂ ಆಕೆ ಮಾತು ಮುಂದುವರಿಸಿದಳು. 'ಪೊಲೀಸರನ್ನು ಬಯ್ಯುವವರೇ ಜಾಸ್ತಿ. ಎದುರಿಗೆ ಬಯ್ಯದಿರಬಹುದು. ಆದರೆ ಪೊಲೀಸರೆಂದರೆ ಎಲ್ಲರಿಗೂ ತಿರಸ್ಕಾರ. ಮೇಲಿನವರು ಕೆಳಗಿನವರನ್ನು ಬಯ್ಯುವುದಿದೆ. ಯಾಕೆಂದರೆ ಅವರನ್ನು ಅವರ ಮೇಲಿನವರು, ರಾಜಕಾರಣಿಗಳು ಎಲ್ಲರೆದುರೇ ಬಯ್ಯುತ್ತಾರೆ.'

'ತಪ್ಪಲ್ಲವೇ' ನಾನೆಂದೆ.

'ಕೆಲವೊಮ್ಮೆ ಆತ್ಮಹತ್ಯೆ ಮಾಡಿಕೊಳ್ಳೋಣ ಅಂತ ಅನ್ನಿಸುತ್ತದೆ. ನೀವು ಸೀಟು ಆಫರ್ ಮಾಡಿದಾಗ ಮನಸ್ಸು ತುಂಬಿ ಬಂತು' ಎಂದಳವಳು.

ನನಗೆ ಛಕ್ಕನೆ ಕೆಲವು ತಿಂಗಳ ಹಿಂದೆ ಪತ್ರಿಕೆಗಳಲ್ಲಿ ಓದಿದ ಒಂದೆರಡು ಘಟನೆಗಳು ನೆನಪಾದುವು.

'ನಮ್ಮ ಬದುಕು ನಿರಾಳವಾಗಿ ಸಾಗಲು ರಕ್ಷಣೆ ಕೊಡುವ ಪೊಲೀಸರನ್ನು ನಾವು ಬಯ್ಯುತ್ತೇವೆ. ದೇಶದ ರಕ್ಷಣೆ ಮಾಡುವ ಸೈನಿಕರಿಗೆ ನಾವು ಕಲ್ಲು ಹೊಡೆಯುತ್ತೇವೆ. ಅಲ್ಲವೇ?' ಎಂದೆ.

ಸಾಮಾನ್ಯವಾಗಿ ಮೆಟ್ರೊದಲ್ಲಿ ಯಾರೂ ಮಾತನಾಡುವುದಿಲ್ಲ. ಅಕ್ಕಪಕ್ಕದವರೆಲ್ಲ ತಲೆ ತಿರುಗಿಸಿ ನಮ್ಮನ್ನೇ ಮೌನವಾಗಿ ನೋಡುತ್ತಿದ್ದರು. ಅನೌನ್ಸ್‌ಮೆಂಟ್ ಕೇಳಿಸಿತು – ಮುಂದಿನ ನಿಲ್ದಾಣ ಶ್ರೀರಾಮಪುರ. ಬಾಗಿಲು ಎಡಗಡೆಗೆ ತೆರೆಯುತ್ತದೆ. ಇಳಿಯುವಾಗ ಮತ್ತು ಹತ್ತುವಾಗ ಅಂತರವನ್ನು ಕಾಯ್ದುಕೊಳ್ಳಿ.

ಮೆಟ್ರೊ ನಿಂತಿತು. ಅವಳು ಕೈ ಎತ್ತಿ 'ಬೈ ಸರ್' ಎಂದಳು. ನಾನೂ 'ಬೈ' ಹೇಳಿ ಕೆಳಗಿಳಿದೆ.

## ಗೋಪಾಲಕೃಷ್ಣ ಪೈ

ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಗೋಪಾಲಕೃಷ್ಣ ಪೈ ಕಾಸರಗೋಡಿನ ಪೆರ್ಲದವರು. ಅವರ ಕಥಾ ಸಂಗ್ರಹಗಳು: 'ತಿರುವು' 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ'. ಅವರ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳು. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.